
ಜನರಿಗೆ ಮನವಿಟ್ಟು ಮಾತಾಡಿಸುವವರೇ ಇರುವುದಿಲ್ಲ. ಇವರ ಅನುಭವ ಆಲಿಸುವವರು ತುಂಬಾ ಕಡಿಮೆ. ಜಗತ್ತು ತಮ್ಮನ್ನು ತಿರಸ್ಕರಿಸಿದೆ ಎಂದು ಭಾವಿಸಿ ಅವರು ಹೆಚ್ಚು ಮೌನಿಗಳಾಗಿರುತ್ತಾರೆ. ಅವರ ಮಹತ್ವವನ್ನು ನೆನಪಿಸಿ ಮಾತಿಗೆ ಎಳಕೊಂಡರೆ ಸರಾಗವಾಗಿ ಮನ ಬಿಚ್ಚಿ ಹಗುರಾಗುತ್ತಾರೆ.



'ಸಲೀಂ ಅಲಿ ದೊಡ್ಡ ಮೇಧಾವಿ ಮನುಷ್ಯ. ಅವರ ಜೊತೆ ಸಹಾಯಕನಾಗಿ ಕೆಲಸ ಮಾಡಿದ್ದೆ. ಅವರು ರಾತ್ರಿ ಪಕ್ಷಿಗಳ ಹಿಡಿಯಲು ನಮ್ಮ ಕೈಯಿಂದ ಬಲೆ ಹಾಕಿಸುತ್ತಿದ್ದರು. ಬೆಳಗ್ಗೆ ಎದ್ದು ಅವರೊಟ್ಟಿಗೆ ಹೋಗಿ ಸೆರೆ ಸಿಕ್ಕ ಹಕ್ಕಿಗಳನ್ನು ಹಿಡಿದು ತಂದು ಕೊಡುತ್ತಿದ್ದೆ. ಅದರ ವಿವರಗಳನ್ನೆಲ್ಲಾ ಬರೆದುಕೊಂಡು ಕಾಲಿಗೆ ರಿಂಗ್ ತೊಡಿಸಿ ಹಾರಿ ಬಿಡುತ್ತಿದ್ದರು. ಅವರ ಜೊತೆ ಐದಾರು ವರ್ಷ ಕೆಲಸ ಮಾಡುತ್ತಾ ಓದು ಬರಹ ಬಾರದ ನಾನು ಪಕ್ಷಿಗಳ ಹೆಸರನ್ನು, ಅವುಗಳ ನಡವಳಿಕೆಯನ್ನು ಅರಿತೆ. ಪಕ್ಷಿಗಳ ಮಹತ್ವ, ಮಾನವ ಲೋಕಕ್ಕೆ ಇವುಗಳಿಂದ ಸಲ್ಲುತ್ತಿರುವ ಉಪಕಾರಗಳನ್ನು ಸಲೀಂ ಅಲಿ ಸಾಹೇಬರು ತುಂಬಾ ಚೆನ್ನಾಗಿ ವಿವರಿಸುತ್ತಿದ್ದರು. ಅವರು ಜ್ಞಾನದ ದೊಡ್ಡ ಪರ್ವತವಾಗಿದ್ದರು. ನಾನು ಅವರಿಂದ ಕಲಿತ ವಿದ್ಯೆಯನ್ನು ಮಕ್ಕಳಿಗೆ ಕಲಿಸಿದೆ. ಪಕ್ಷಿಗಳನ್ನು ತೋರಿಸುವ, ನಿಮ್ಮಂತಹ ಜನರಿಗೆ ಸೇವೆ ಮಾಡುವ ಕಾಯಕದಿಂದಲೇ ನಮ್ಮ ಕುಟುಂಬ ಬದುಕಿ ಬಾಳುತ್ತಿದೆ. ಪಕ್ಷಿಗಳು ನಮ್ಮ ಹೊಟ್ಟೆ ಹೊರೆಯುವ ದೇವರುಗಳು' ಎಂದು ಭಾವುಕವಾಗಿ ರತನ್ ಸಿಂಗ್ ನುಡಿದರು.

ಕಿಯೋಲಾಡಿಯೊ ರಾಷ್ಟ್ರೀಯ ಉದ್ಯಾನವನ ಇಪ್ಪತ್ತೊಂಬತ್ತು ಕಿಲೋಮೀಟರ್ ವಿಸ್ತೀರ್ಣದಲ್ಲಿ ಹಬ್ಬಿದೆ. ಕೃತಕ ವಿಧಾನದ ಮೂಲಕ ಇಲ್ಲಿಗೆ ನೀರನ್ನು ಹಾಯಿಸಿ ಸದಾ ತೇವಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಸುತ್ತ ಎಲ್ಲೂ ನೀರಿನ ಲಭ್ಯತೆ ಇಲ್ಲದ ಕಾರಣಕ್ಕೆ ಇಲ್ಲಿ ಪಕ್ಷಿಗಳು ಪ್ರಾಣಿಗಳು ಬಂದು ಅನಿವಾರ್ಯವಾಗಿ ತಂಗುತ್ತವೆ. ಯಥೇಚ್ಛವಾಗಿ ಸಿಗುವ ಮೀನು, ಏಡಿ, ಕಪ್ಪೆ, ಹಾವುಗಳು ಮತ್ತು ಕೀಟಗಳ ಸಿಗುವಿಕೆ ಕೂಡ ಮತ್ತೊಂದು ಕಾರಣ. ಎಲ್ಲಾ ಬಗೆಯ ಹಕ್ಕಿಗಳಿಗೂ ಇಲ್ಲಿ ಊಟ, ತಿಂಡಿ ಸೊಂಪಾಗಿದೆ. ನಾವು ಎಲ್ಲೆಲ್ಲೋ ಹುಡುಕಿಕೊಂಡು ಪರದಾಡಿ ಅಲೆದು ಸುಸ್ತಾದ ಹಕ್ಕಿಗಳಿಲ್ಲಿ ಸಗಟಾಗಿ ಮತ್ತು ಸಲೀಸಾಗಿ ಸಿಗುತ್ತವೆ.

ಈ ಅಭಯಾರಣ್ಯದ ಒಳಗೆ ಓಡಾಡಲು ಬಾಡಿಗೆ ಸೈಕಲ್ ರಿಕ್ಷಾ ಬಳಸಬೇಕು. ಒರಟಾದ, ದಡಕ್ ಬಡಕ್ ಎಂದು ಎತ್ತಾಕುವ ಕಚ್ಚಾ ರಸ್ತೆಯ ಮೇಲೆ ಕುಣಿದಾಡುತ್ತಾ ಹೋಗುವುದು ಯಮಸಾಹಸ ಕೆಲಸ. ಎಷ್ಟೇ ಜತನದಿಂದ ಕ್ಯಾಮೆರಾ ನೋಡಿಕೊಂಡರೂ ಎಲ್ಲಾದರೂ ಒಂದು ಕಡೆ ಸೈಕಲ್ ರಿಕ್ಷಾದ ಕಬ್ಬಿಣದ ಸಲಾಕೆಗೆ ತಾಗೇ ತಾಗುತ್ತಿತ್ತು. ಇಲ್ಲಿನ ಸೈಕಲ್ ರಿಕ್ಷಾ ಚಾಲಕರು ಪಕ್ಕಾ ನ್ಯಾಚುರಲಿಸ್ಟ್ ಆಗಿ ರೂಪಾಂತರಗೊಂಡಿದ್ದಾರೆ. ಪಕ್ಷಿಗಳನ್ನು ಗುರುತಿಸಿ ಪಟಪಟನೆ ಅವುಗಳ ಆಂಗ್ಲ ಹೆಸರನ್ನು ಹೇಳುವಷ್ಟು ಪರಿಣಿತರಾಗಿದ್ದಾರೆ. ಇವರಲ್ಲಿ ಹೆಚ್ಚು ಓದಿದವರು ಕಡಿಮೆ. ಆದರೂ ಅನ್ನ ದುಡಿಯುವ ಅನಿವಾರ್ಯತೆ ಸಾಕಷ್ಟು ವಿದ್ಯೆಯನ್ನು ಕಲಿಸಿಬಿಟ್ಟಿದೆ. 'ಪಕ್ಷಿ ನೋಡುಗರು ಬಾರದಿರುವ ಸಮಯದಲ್ಲಿ ಏನು ಕೆಲಸ ಮಾಡುತ್ತೀರಾ? ಎಂದು ವಿಚಾರಿಸಿದೆ. ನಮ್ಮಲ್ಲಿ ಕೆಲವರು ಗಾರೆ ಕೆಲಸಕ್ಕೆ ಹೋಗುತ್ತೇವೆ. ಕೆಲವರು ಸೊಪ್ಪು,